ಶ್ರೀ ಡಿ.ವಿ. ಸದಾನಂದಗೌಡ : ಇದಕ್ಕೆ ಎಲ್ಲಾ ಸದಸ್ಯರ ಒತ್ತಡವೂ ಇದೆ.

ಅಧ್ಯಕ್ಷರು : ಈ ಅಧಿವೇಶನದಲ್ಲಿಯೇ ತೆಗೆದುಕೊಳ್ಳಲಾಗುವುದು. ಅಂದರೆ 16ನೇ ತಾರೀಖಿನೊಳಗಾಗಿಯೇ ಅದನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಬೆಳಗಾಂ ಜಿಲ್ಲಾ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಶ್ರೀ ಡಿ.ಬಿ. ಇನಾಂದಾರ್ (ಕಿತ್ತೂರು) : ಮಾನ್ಯ ಅಧ್ಯಕ್ಷರೇ, ನಾನು ಸಹಕಾರಿ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಬೆಳಗಾಂ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ಮಾಡಿ, ಕೆಲವು ರೂಲ್ಸ್ ಅಂಡ್ ಪ್ರೊಸೀಜರ್ ಫಾಲೋ ಮಾಡಿರುವುದಿಲ್ಲ. ಮತ್ತು ಆ ದಿನ ಅಡಿಷನಲ್ ಅಜೆಂಡಾ ಎಂದು ತಂದು ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ ಎಂದು ಮಾಡಿದ್ದಾರೆ. ಅದಕ್ಕಾಗಿ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ರೂಲ್ಸ್ ಅಂಡ್ ಪ್ರೊಸೀಜರ್ ಫಾಲೋ ಮಾಡಲಿಕ್ಕೆ ಅವರಿಗೆ ನಿರ್ದೇಶನ ಕೊಟ್ಟು ಚುನಾವಣೆ ಮಾಡಲು ವ್ಯವಸ್ಥೆ ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಅವರು ಹೇಳಿದಹಾಗೆ ಅಡಿಷನಲ್ ಅಜೆಂಡಾನೂ ಅಲ್ಲ. ಅದನ್ನು ಇತರೇ ವಿಷಯಗಳಲ್ಲಿ ತೆಗೆದುಕೊಂಡಿದ್ದಾರೆ. ಇನ್ನಷ್ಟು ದೊಡ್ಡ ತಪ್ಪು ಮಾಡಿದ್ದಾರೆ. ಚುನಾವಣೆ ಇರುವುದರಿಂದ ಜಾಯಿಂಟ್ ಡೈರೆಕ್ಟರ್ ಮುಂದೆ ಲಿಖಿತವಾಗಿ ಅದರ ಬಗ್ಗೆ ತಕರಾರು ಅರ್ಜಿ ಹಾಕಬೇಕಾಗುತ್ತದೆ. ನಾವೂ ಕೂಡ ಸರ್ಕಾರದ ಪರವಾಗಿ ಆ ನಿರ್ಣಯವನ್ನು ರದ್ದು ಮಾಡಿ ಪುನಃ ಚುನಾವಣೆ ಮಾಡುವಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಡಿ.ಬಿ. ಇನಾಂದಾರ್ : ಅಧ್ಯಕ್ಷರೇ, the Deputy Registrar of Co-operative Societies is a part and parcel of the Board. He should have reported this matter to the Government, whereas he has failed in his duties even though he is a Director on the Board. ಈಗ ನಾನೂ ಕೂಡ ಸಹಕಾರಿ ಸಕ್ಕರೆ ಕಾರ್ಖಾನೆ ಚೇರ್ಮನ್ ಇದ್ದೇನೆ. ನಾನು ಮ್ಯಾನೇಜಿಂಗ್ ಡೈರಕ್ಟರ್ ಹತ್ತಿರ, 5 ವರ್ಷ ಚೇರ್ಮನ್ ಎಂದು ಬರೆಸಿಕೊಂಡರೆ, if that is going to hold good, let us follow that procedure. There is no co-operation left.

ಶ್ರೀ ಎಸ್.ಎಸ್. ಪಾಟೀಲ್ : ಎಲ್ಲರೂ ಕೂಡಿಕೊಂಡು ಸರ್ವಾನುಮತದ ಠರಾವು ಮಾಡಿದ್ದಾರೆ. ಅದು ಇತರೆ ವಿಷಯಗಳಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ನಿರ್ದೇಶಕರಾಗಿ ಯಾರು ಅಧಿಕಾರೇತರ ಸದಸ್ಯರು ಇರುತ್ತಾರೆ. ಅವರು ಸರ್ವಾನುಮತದ ನಿರ್ಣಯ ಮಾಡಿಕೊಳ್ಳಲಿ. ಆದರೆ, ನಿಮ್ಮ ಅಧಿಕಾರಿ ಯಾರಿದ್ದಾರೆ, ಡೆಪ್ಯೂಟಿ

ರಿಜಿಸ್ಟ್ರಾರ್ ಅವರಿಗೆ ನೀವು ಹೇಳಬೇಕು. ಇದು ತಪ್ಪು ಎಂದು ಹೇಳಬೇಕು. He cannot be a party to it. ಅವರ ಮೇಲೆ ತಾವು ಕ್ರಮ ಜರುಗಿಸಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಅದನ್ನು ನೋಡಿಸಿದೆ. ಆ ದಿವಸ ನಮ್ಮ ಡೆಪ್ಯೂಟಿ ರಿಜಿಸ್ಟ್ರಾರ್ ಅಬ್ಸೆಂಟ್ ಇದ್ದಾರೆ, ಅವತ್ತು ಈ ನಿರ್ಣಯ ಮಾಡಿಕೊಂಡಿದ್ದಾರೆ.

ಶ್ರೀ ಡಿ.ಟಿ. ಇನಾಂದಾರ್ : ಸಹಕಾರಿ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಅವರು ಹೋದ ವರ್ಷ ಕೂಡ ಈ ಪ್ರೊಸೀಜರ್ ಮಾಡಿದ್ದಾರೆ. ಅದರ ಹಿಂದೆ ಕೂಡ ಮಾಡಿಕೊಂಡು ಬಂದಿದ್ದಾರೆ. ಆಗ ಇದ್ದಂಥ ಡೆಪ್ಯೂಟಿ ರಿಜಿಸ್ಟ್ರಾರ್ should have reported to the Government that this procedure is not correct. They cannot sit over the matter and say that it is right. ಇವರೂ ಕೂಡ ಈ ರೀತಿ ಮಾಡಿದ್ದೇವೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿತ್ತು, ಆದರೆ ತಂದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಡೆಪ್ಯೂಟಿ ರಿಜಿಸ್ಟ್ರಾರ್ ಆಬ್ಸೆಂಟ್ ಇದ್ದರು, ಅವತ್ತು ಆ ರೀತಿ ಬರೆದು ಕೊಂಡಿದ್ದಾರೆ ಎಂದು ಹೇಳಿದರು. ಬಹುಶಃ ಮ್ಯಾನೇಜಿಂಗ್ ಡೈರೆಕ್ಟರೂ ಡೆಪ್ಯೂಟಿ ರಿಜಿಸ್ಟ್ರಾರೇ ಇರುತ್ತಾರೆಂದು ಕಾಣಿಸುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : ನಾನು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆದಿವಸ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೈವ್ ಬ್ಯಾಂಡ್ ಕೇಂದ್ರದಲ್ಲಿ ಆದ ಪ್ರಕರಣದಲ್ಲಿ ಒಂದು ಕೊಲೆಯಾಗಿದೆ. 10 ದಿವಸದ ಮುಂಚೆ ಕೋಡಿಹಳ್ಳಿಯಲ್ಲೂ ಕೂಡ ಇದೇ ರೀತಿ ಒಂದು ಬಾರ್ ಸಮೀಪ ಕೊಲೆಯಾಗಿದೆ.

MR. SPEAKER : Hon'ble Member Suresh Kumar, kindly help me. The Home Minister is expected. I will take it up later.

SRI. S. SURESH KUMAR : Yes, sir.

ಉಳ್ಳಾಲ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗರೆ ಎಂಬ ಪ್ರದೇಶದಲ್ಲಿ ಜಮೀನು ಮತ್ತು ಹಕ್ಕುಪತ್ರ ವಿತರಣೆ

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೇ ನನ್ನ ಉಳ್ಳಾಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗರೆ ಎಂಬ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹೊಸ ವಿಧಾನ ಸಭಾ ಅಧಿವೇಶನ ಪ್ರಾರಂಭವಾದ ನಂತರ ನಾನು ಇಲ್ಲಿ ಒತ್ತಾಯ ಮಾಡುತ್ತಿದೆ. ರಾಜ್ಯ ಸರ್ಕಾರ ಇತ್ತೀಚೆಗೆ ಅದನ್ನು ಕಂದಾಯ ಗ್ರಾಮವೆಂದು ಘೋಷಣೆ ಮಾಡಿದೆ. ಮಂಗಳೂರು ಮಹಾನಗರಪಾಲಿಕೆಯಲ್ಲಿ ಅಡಳಿತಾತ್ಮಕವಾಗಿ ಸೇರಿಕೊಂಡಿದೆ. ಆದರೆ, ಸಮಸ್ಯೆ ಏನೆಂದರೆ ಕಳೆದ 50 ವರ್ಷಗಳಿಂದ ಅಲ್ಲಿಯ